/2021

12/4/22

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1240** |
| 2. ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸುವ ದಿನಾಂಕ | : | **23-12-2021** |
| 4. ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇತ್ತೀಚೆಗೆ ಎ.ಸಿ.ಬಿ. ದಾಳಿ ನಡೆದಿದೆಯೇ; ಇದ್ದಲ್ಲಿ, ಕೇಂದ್ರ ಕಛೇರಿ ಸೇರಿದಂತೆ ಇತರ ಯಾವ ಯಾವ ಬಿಡಿಎ ಕಚೇರಿಗಳ ಮೇಲೆ ದಾಳಿ ನಡೆದಿದೆ; ಯಾವ ದಿನಾಂಕದಂದು ನಡೆದಿದೆ; | • ದಿನಾಂಕ: 19.11.2021 ಭ್ರಷ್ಟಾಚಾರ ನಿಗ್ರಹ ದಳದ ವತಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯ ವಿವಿಧ ವಿಭಾಗಗಳ ಕಛೇರಿಯಲ್ಲಿ ಶೋಧನೆಯನ್ನು ಕೈಗೊಳ್ಳಲಾಗಿರುತ್ತದೆ.<br>• ದಿನಾಂಕ: 20.11.2021 ರಂದು ಸಹ ಕೇಂದ್ರ ಕಛೇರಿಯಲ್ಲಿ ಶೋಧನೆಯನ್ನು ಮುಂದುವರೆಸಲಾಗಿರುತ್ತದೆ.<br>• ದಿನಾಂಕ: 23.11.2021 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತರರು ಕಛೇರಿ, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು, ದಕ್ಷಿಣ ವಿಭಾಗದ ಕಾರ್ಯಪಾಲಕ ಅಭಿಯಂತರರು ಕಛೇರಿ, ಬನಶಂಕರಿ, ಬೆಂಗಳೂರು, ಕಾರ್ಯಪಾಲಕ ಅಭಿಯಂತರರ ಕಛೇರಿ ಪಶ್ಚಿಮ ವಿಭಾಗ, ವಿಜಯನಗರ, ಬೆಂಗಳೂರು, ಹಾಗೂ, ಕಾರ್ಯಪಾಲಕ ಅಭಿಯಂತರರು |

| | | |
|---|---|---|
| | | ಉತ್ತರ ವಿಭಾಗ, ಆರ್.ಟಿ.ನಗರ, ಬೆಂಗಳೂರು ಈ ಕಛೇರಿಯಲ್ಲಿ ಶೋಧನೆಯನ್ನು ನಡೆಸಲಾಗಿರುತ್ತದೆ. |
| ಆ) | ದಾಳಿ ಪ್ರಕರಣದಲ್ಲಿ ಆರೋಪಿತರಾಗಿರುವ ಅಧಿಕಾರಿ/ನೌಕರರುಗಳು ಯಾರು ಯಾರು (ಹೆಸರು ಮತ್ತು ಹುದ್ದೆವಾರು ವಿವರ ನೀಡುವುದು) | ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 55/2021 ಕಲಂ. 7(ಎ) , 7(ಎ), 8,12,13(1)(ಎ) ರೆ/ವಿ 13(2) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ. ಬಿಡಿಎಯ ಕಛೇರಿಯಲ್ಲಿನ ಶೋಧನೆಯ ನಂತರದಲ್ಲಿ ದೊರೆತ ಕಡತ/ದಾಖಲಾತಿಗಳನ್ನು ಪರಿಶೀಲಿಸಿ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988ರ ಕಲಂ. 17ಎ ಅಡಿಯಲ್ಲಿ ತನಿಖೆ/ವಿಚಾರಣೆ ನಡೆಸಲು ಕೋರಿ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ವ್ಯವಹರಿಸಲಾಗಿದೆ. ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ನಂತರ ಪ್ರಕರಣ ದಾಖಲಿಸುವ ಕುರಿತಂತೆ ಕ್ರಮ ವಹಿಸಲಾಗುವುದು. |
| ಇ) | ದಾಳಿ ಪ್ರಕರಣದಲ್ಲಿ ಆರೋಪಿತರಾಗಿರುವ ಅಧಿಕಾರಿ/ನೌಕರರುಗಳು ಎಸಗಿರುವ ಆರೋಪಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಶೋಧನೆ ನಡೆಸಲಾಗಿ, ಶೋಧನಾ ಕಾಲದಲ್ಲಿ ಕಡತ/ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಅಕ್ರಮವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತವೆ.<br><br>• ಶೋಧನೆಯ ಸಮಯದಲ್ಲಿ ಬೆಂಗಳೂರು ನಗರದಲ್ಲಿ ಬಿಡಿಎ ನಿಂದ |



Generated from eOffice by G JAGADEESHA, CMO-IS(S.I), JOINT SECRETARY, DHO ...

/2021

| | | |
|---|---|---|
| | | ನಿರ್ಮಾಣವಾಗುತ್ತಿರುವ ಕೆಲವು ಬಡಾವಣೆಗಳಲ್ಲಿ ಅರ್ಹತೆ ಇಲ್ಲದಿದ್ದರೂ ಸಹ ನಿವೇಶನಗಳನ್ನು ಹಂಚಿಕೆ ಮಾಡಿರುವುದು.<br>• ಒಂದೇ ನಿವೇಶನವನ್ನು ಹಲವರಿಗೆ ಹಂಚಿಕೆ ಮಾಡಿರುವುದು.<br>• ಬದಲೀ ನಿವೇಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡುವುದು.<br>• ದಾಖಲಾತಿಗಳನ್ನು ತಿದ್ದಿ ಅಕ್ರಮ ಎಸಗಿರುವುದು.<br>• ಸಿ.ಎ. ನಿವೇಶನಗಳನ್ನು ಹಾಗೂ ಕಾರ್ನರ್ ಸೈಟ್(ಮೂಲೆ ನಿವೇಶನ) ಹಂಚಿಕೆ ನಿಯಮ ಉಲ್ಲಂಘನೆ ಮಾಡಿ ಅವ್ಯವಹಾರವೆಸಗಿರುವುದು ಕಂಡುಬಂದಿರುತ್ತದೆ.<br>• ಸರ್ಕಾರದಿಂದ ನೋಟಿಫೈ ಆಗಿರುವ ಜಮೀನಿನಲ್ಲಿ ನಕಲಿ ವಾರಸುದಾರರನ್ನು ಸೃಷ್ಟಿಸಿ ಅವರಿಗೆ ಸರ್ಕಾರದಿಂದ ನಗದು/ಸೈಟನ್ನು ಕಾನೂನು ಬಾಹಿರವಾಗಿ ಪರಿಹಾರ ಕೊಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. |
| ಈ) | ಸದರಿ ಆರೋಪಿತರ ಮೇಲೆ ಎಫ್.ಐ.ಆರ್ ದಾಖಲಿಸಲಾಗಿದೆಯೇ; ಪ್ರಾಧಿಕಾರದ ವತಿಯಿಂದ ದಾಳಿ ನಡೆದ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ; ಇದ್ದಲ್ಲಿ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:55/2021 ಕಲಂ. 7(ಎ), 7(ಎ), 8,12,13(1)(ಎ) ರೆ/ವಿ 13(2) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ರೀತ್ಯಾ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ. ಆರೋಪಿತರ ವಿರುದ್ಧ ತನಿಖೆ/ವಿಚಾರಣೆ ಕೈಗೊಳ್ಳಲು ಭ್ರಷ್ಟಾಚಾರ ಪ್ರತಿಬಂಧ |

| | | | |
|---|---|---|---|
| | | | ಕಾಯ್ದೆ 1988 ಕಲಂ. 17ಎ ಅಡಿಯಲ್ಲಿ ಪೂರ್ವಾನುಮತಿ ನೀಡುವಂತೆ ಆಪಾದಿತರ ಅಧಿಕಾರಿಗಳ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ. |

**ಸಂಖ್ಯೆ: ಸಿಆಸುಇ** 77 ಎಸಿಬಿ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ